ಕರ್ನಾಟಕ ಸರಕಾರ

# ಆಯುಕ್ತರ ಕಾರ್ಯಾಲಯ, ಸಾರ್ವಜನಿಕ ಶಿಕ್ಷಣ ಇಲಾಖೆ, ರೊದ್ದ ರಸ್ತೆ, ಧಾರವಾಡ

ಸಂಖ್ಯೆ:ಜಿ2:ಶಾಶಿಅ:ಖಾಹುತುಅ:50:2019-20 ದಿನಾಂಕ: -03-2020. 05-05-2020

: ಜ್ಞಾಪನ :

ವಿಷಯ : **ಹುಬ್ಬಳ್ಳಿ ಎಜ್ಯುಕೇಶನ್ ಸೊಸೈಟಿ(ರಿ) ಹುಬ್ಬಳ್ಳಿ ಜಿ:ಧಾರವಾಡ** ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ **ಸಿಟಿ ಪ್ರೌಢಶಾಲೆ ವಿಜಯನಗರ ಹುಬ್ಬಳ್ಳಿ** ಈ ಅನುದಾನಿತ ಪ್ರೌಢಶಾಲೆಯಲ್ಲಿ ದಿನಾಂಕ:31-12-2015 ರವರೆಗಿನ ಅವಧಿಯಲ್ಲಿ ಖಾಲಿಯಾದ ಸಹ ಶಿಕ್ಷಕರ ವೃಂದದ ಹುದ್ದೆಗಳನ್ನು ತುಂಬಿಕೊಳ್ಳಲು ಇಲಾಖಾ ಅನುಮತಿ ನೀಡುವ ಕುರಿತು.

ಉಲ್ಲೇಖ :

1. ಉಪನಿರ್ದೇಶಕರು. ಸಾರ್ವಜನಿಕ ಶಿಕ್ಷಣ ಇಲಾಖೆ.ಧಾರವಾಡ ಇವರ ಪತ್ರಸಂಖ್ಯೆ:ಜಿ1:ಶಾಶಿಅ ಸಿಟಿ:ಪ್ರೌಶಾ:ಖಾಹುತುಅ:1694/2019-20,ದಿನಾಂಕ:29.08.19.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 46 ಎಸ್ಇಪಿ 2006, ದಿನಾಂಕ: 12-04-2006 ಮತ್ತು 19-06-2008.
3. ಸರ್ಕಾರದ ಆದೇಶ ಸಂಖ್ಯೆ: ಇಡಿ 77 ಎಸ್ಇಪಿ 2007(ಭಾಗ), ದಿನಾಂಕ: 31-03-2008.
4. ಸರ್ಕಾರದ ಆದೇಶ ಸಂಖ್ಯೆ: ಇಡಿ 279 ಎಸ್ಇಪಿ 2008, ದಿನಾಂಕ: 13-10-2009.
5. ಸರ್ಕಾರದ ಆದೇಶ ಸಂಖ್ಯೆ: ಇಡಿ 15 ಎಸ್ಇಪಿ 2011, ಬೆಂಗಳೂರು,ದಿನಾಂಕ: 16-07-2014 ಹಾಗೂ 19-11-2014 ಮತ್ತು 07-04-2015.
6. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 08 ಸಹಿಮ 95, ದಿನಾಂಕ: 20-06-1995.
7. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 53 ಸೆನೆನಿ 2001, ದಿನಾಂಕ: 04-01-2008.
8. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 17 ಎಸ್ಎಲ್‌ಬಿ 2008, ದಿ: 22-11-2008.
9. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 52 ವಿವಿಧ 99, ದಿನಾಂಕ: 02-02-2000.
10. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 84 ಎಸ್ಇಪಿ 2007, ದಿನಾಂಕ: 11-01-2012.
11. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 291 ಎಲ್‌ಬಿಪಿ 2015, ದಿನಾಂಕ: 29-09-2016.
12. ಸರ್ಕಾರದ ಆದೇಶ ಸಂಖ್ಯೆ: ಇಡಿ 14 ಎಸ್ಇಪಿ 2017,ದಿನಾಂಕ:29-06-2017,18-07-2017 23-11-2017, 25-09-2018 ಮತ್ತು 06-03-2019.

## ಪ್ರಸ್ತಾವನೆ

**ಹುಬ್ಬಳ್ಳಿ ಎಜ್ಯುಕೇಶನ್ ಸೊಸೈಟಿ(ರಿ) ಹುಬ್ಬಳ್ಳಿ ಜಿ:ಧಾರವಾಡ** ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ **ಸಿಟಿ ಪ್ರೌಢಶಾಲೆ ವಿಜಯನಗರ ಹುಬ್ಬಳ್ಳಿ** ಈ ಅನುದಾನಿತ ಪ್ರೌಢಶಾಲೆಯಲ್ಲಿ ದಿನಾಂಕ: 31-12-2015ರ ಒಳಗೆ ಖಾಲಿಯಾಗಿರುವ ಸಹಶಿಕ್ಷಕರು, ವಿಜ್ಞಾನ(ಸಿಬಿಝಡ್), ಇಂಗ್ಲೀಷ ಮತ್ತು ಕನ್ನಡ ಹುದ್ದೆಗಳನ್ನು ತುಂಬಿಕೊಳ್ಳಲು ಇಲಾಖಾ ಅನುಮತಿ ನೀಡುವ ಕುರಿತಂತೆ, ಆಡಳಿತ ಮಂಡಳಿಯ ಠರಾವಿನೊಂದಿಗೆ ಉಲ್ಲೇಖ (01)ರನ್ವಯ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಇವರು ಶಿಫಾರಸ್ಸಿನೊಂದಿಗೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ಸರ್ಕಾರದ ಆದೇಶ ಸಂಖ್ಯೆ: ಇಡಿ 14 ಎಸ್‌ಇಪಿ 2017, ದಿನಾಂಕ: 29-06-2017, 18-07-2017, 23-11-2017 ಮತ್ತು 25-09-2018 ರನ್ವಯ ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ದಿನಾಂಕ: 01-01-2013 ರಿಂದ 31-12-2015 ರ ಅವಧಿಯಲ್ಲಿ ನಿವೃತ್ತಿ, ರಾಜೀನಾಮೆ, ನಿಧನ ಮತ್ತು ಇತರೆ ಕಾರಣಗಳಿಂದ ಖಾಲಿಯಾಗಿರುವ ಬೋಧಕ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿದೆ.

ಸದರ ಪ್ರಸ್ತಾವನೆಯನ್ನು ಉಲ್ಲೇಖ (2), (3), (4), (5) (6) ಮತ್ತು ಉಲ್ಲೇಖ (11) ಮತ್ತು (12)ರ ಸರ್ಕಾರದ ಆದೇಶಗಳನ್ವಯ ಖಾಸಗಿ ಅನುದಾನಿತ ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಅನುಮತಿ ನೀಡುವ ಹಾಗೂ ಅದರಂತೆ ಆದ ನೇಮಕಾತಿಗಳನ್ನು ಅನುದಾನಸಹಿತ ಅನುಮೋದಿಸುವ ಅಧಿಕಾರವನ್ನು ಆಯಾ ಆಯುಕ್ತರಿಗೆ ಪ್ರತ್ಯಾಯೋಜಿಸಿದ್ದರಿಂದ ಈ ಕೆಳಗಿನಂತೆ ಹುದ್ದೆ ತುಂಬಲು ಅನುಮತಿ ನೀಡಿ ಆದೇಶಿಸಲಾಗಿದೆ.

## ಃಆದೇಶಃ

ಮೇಲಿನ ಪೀಠಿಕೆಯಲ್ಲಿ ಪ್ರಸ್ತಾಪಿಸಲಾದ ಎಲ್ಲ ಅಂಶಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಹಾಗೂ ಉಲ್ಲೇಖ (01) ರನ್ವಯ ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ. ಇವರು **ಹುಬ್ಬಳ್ಳಿ ಎಜ್ಯುಕೇಶನ್ ಸೊಸೈಟಿ(ರಿ) ಹುಬ್ಬಳ್ಳಿ ಜಿ:ಧಾರವಾಡ** ಈ ಸಂಸ್ಥೆಯ ವತಿಯಿಂದ ನಡೆಯುತ್ತಿರುವ **ಸಿಟಿ ಪ್ರೌಢಶಾಲೆ ವಿಜಯನಗರ ಹುಬ್ಬಳ್ಳಿ** ಈ ಅನುದಾನಿತ ಪ್ರೌಢಶಾಲೆಯಲ್ಲಿ ದಿನಾಂಕ: 31-12-2015ರ ಒಳಗೆ ಖಾಲಿಯಾಗಿರುವ ಸಹಶಿಕ್ಷಕರ ವೃಂದದ ಹುದ್ದೆಗಳನ್ನು ತುಂಬಿಕೊಳ್ಳಲು ಇಲಾಖಾ ಅನುಮತಿ ನೀಡುವಂತೆ ಶಿಫಾರಸ್ಸು ಮಾಡಿರುವುದನ್ನು ಹಾಗೂ ಆಡಳಿತ ಮಂಡಳಿಯವರ ದಿನಾಂಕ: 21-01-2020 ರ ಠರಾವನ್ನು ಆಧರಿಸಿ ಮೇಲಿನ ಉಲ್ಲೇಖ (2), (3), (4), (5) (6) ಮತ್ತು ಉಲ್ಲೇಖ (11) ಮತ್ತು (12)ರ ಸರ್ಕಾರದ ಆದೇಶಗಳನ್ವಯ ಈ ಕೆಳಗಿನ ವಿವರದಂತೆ ಅನುಮತಿ ನೀಡಿ ಆದೇಶಿಸಿದೆ.

| ಶಾಲೆಯ ಹೆಸರು | ಹುದ್ದೆಯ ಹೆಸರು | ಹುದ್ದೆ ತೆರವಾದ ದಿನಾಂಕ | ಹುದ್ದೆ ತೆರವಾಗಲು ಕಾರಣ | ಅನುಮತಿಸಿದ ಬೋಧನಾ ವಿಷಯ | ಮಾಧ್ಯಮ | ಮೀಸಲಾತಿ ಸೂಚ್ಯಾಂಕ | ಮೀಸಲಾತಿ ಗುಂಪು | ವೇತನ ಶ್ರೇಣಿ (ರೂ) |
|---|---|---|---|---|---|---|---|---|
| ಸಿಟಿ ಪ್ರೌಢಶಾಲೆ ವಿಜಯನಗರ ಹುಬ್ಬಳ್ಳಿ | ಸಹ ಶಿಕ್ಷಕರು | 30-04-2013 | ಶ್ರೀ ಜಿ.ಜಿ ಲೋಬೋ ಗೋಳ ಇವರ ನಿವೃತ್ತಿಯಿಂದ | ವಿಜ್ಞಾನ (ಸಿಬಿಝಡ್) | ಕನ್ನಡ | 05 ನೇ ಸೂಚ್ಯಾಂಕ | ಪ್ರವರ್ಗ-1 | 33450 – 62600 |
| | ಸಹ ಶಿಕ್ಷಕರು | 31-05-2011 | ಶ್ರೀ ಜಿ.ಆರ್. ಗುಡಿ ಇವರ ನಿವೃತ್ತಿಯಿಂದ | ಇಂಗ್ಲೀಷ | ಕನ್ನಡ | 06 ನೇ ಸೂಚ್ಯಾಂಕ | ಸಾಮಾನ್ಯ ಮಹಿಳೆ | 33450 – 62600 |
| | ಸಹ ಶಿಕ್ಷಕರು | 30-08-2015 | ಶ್ರೀ ಎಸ್.ಬಿ ಮಳಲಿ ಇವರ ನಿವೃತ್ತಿಯಿಂದ | ಕನ್ನಡ | ಕನ್ನಡ | 07 ನೇ ಸೂಚ್ಯಾಂಕ | ಪ್ರವರ್ಗ-2ಎ | 33450 – 62600 |

ಷರತ್ತುಗಳು :

1) ಈ ನೇಮಕಾತಿಯನ್ನು ಕರ್ನಾಟಕ ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ನೇಮಕಾತಿಯ ಆಯ್ಕೆ ಮತ್ತು ಸೇವಾ ಷರತ್ತು ಮತ್ತು ನಿಬಂಧನೆಗಳ ನಿಯಮಗಳು, 1999ರ ಪ್ರಕಾರ ಮತ್ತು ಕಾಲಕಾಲಕ್ಕೆ ಹೊರಡಿಸಲಾದ ತಿದ್ದುಪಡಿಗಳ ಪ್ರಕಾರವೇ ಮಾಡಿಕೊಳ್ಳತಕ್ಕದ್ದು.
2) ಶಾಲೆ ಈಗಾಗಲೇ ವೇತನಾನುದಾನಕ್ಕೆ ಒಳಪಟ್ಟು ನಿವೃತ್ತಿ, ರಾಜೀನಾಮೆ, ನಿಧನ ಮತ್ತು ನಿಯಮಾನುಸಾರ ಸಕ್ಷಮ ಪ್ರಾಧಿಕಾರದಿಂದ ಅನುಮೋದಿಸಲಾದ ಬಡ್ತಿಯಿಂದ ಹುದ್ದೆ ಖಾಲಿಯಾಗಿರತಕ್ಕದ್ದು.
3) ಹುದ್ದೆಗೆ ನಿಗದಿಪಡಿಸಲಾದ ವಿದ್ಯಾರ್ಹತೆ, ವಯೋಮಿತಿ ಹಾಗೂ ಮೀಸಲಾತಿ ಪಾಲನೆ ನೇಮಕಾತಿ ನಿಯಮಗಳಂತೆ ಪಾರದರ್ಶಕವಾಗಿ ಹುದ್ದೆ ಭರ್ತಿ ಮಾಡಿರುವುದನ್ನು ದೃಢೀಕರಿಸಿಕೊಳ್ಳತಕ್ಕದ್ದು.
4) ಅನುದಾನ ಸಂಹಿತೆ ಹಾಗೂ ಸರ್ಕಾರದಿಂದ ಕಾಲ ಕಾಲಕ್ಕೆ ಹೊರಡಿಸಿದ ಆದೇಶಗಳನ್ನು ಪಾಲಿಸತಕ್ಕದ್ದು.
5) ಸರ್ಕಾರದ ಆದೇಶ ಸಂಖ್ಯೆ: ಇಡಿ 17 ಎಸ್‌ಎಲ್‌ಬಿ 2008, ದಿನಾಂಕ: 22-11-2008ರಂತೆ ನೇಮಕಾತಿ ಪ್ರಕ್ರಿಯೆ ಕೈಗೊಳ್ಳತಕ್ಕದ್ದು ಹಾಗೂ ಸದರ ಆದೇಶದನ್ವಯ ಅಭ್ಯರ್ಥಿಯು ಶೈಕ್ಷಣಿಕ ಅರ್ಹತಾದಾಯಕ ಪರೀಕ್ಷೆಯಲ್ಲಿ ಪಡೆದ ಅಂಕಗಳ ಸರಾಸರಿ ಪ್ರತಿಶತವನ್ನು ಗಣನೆಗೆ ತೆಗೆದುಕೊಂಡು, ಅದನ್ನು ಅಭ್ಯರ್ಥಿಯು ಸಂದರ್ಶನಕ್ಕೆ ನಿಗದಿಪಡಿಸಲಾದ **ಗರಿಷ್ಟ 15** ಅಂಕಗಳ ಪೈಕಿ ಪಡೆದ ಅಂಕಗಳೊಂದಿಗೆ ಸೇರಿಸಿ ಅರ್ಹತಾ ಪಟ್ಟಿಯನ್ನು ತಯಾರಿಸತಕ್ಕದ್ದು. ಈ ರೀತಿ ತಯಾರಿಸಿದ ಅರ್ಹತಾ ಪಟ್ಟಿಯಲ್ಲಿ ಮೊದಲಿಗರಾದವರನ್ನು ಮಾತ್ರ ಆಯ್ಕೆ ಮಾಡತಕ್ಕದ್ದು.
6) ಸರಕಾರದ ಅಧಿಸೂಚನೆ ಸಂಖ್ಯೆ: ಇಡಿ 17 ಎಸ್‌ಎಲ್‌ಬಿ 2008, ದಿನಾಂಕ: 22-11-2008 ರ ಅನುಬಂಧ-1 ರ (4) ರಂತೆ ಅರ್ಜಿ ಹಾಕಿರುವ ಅಭ್ಯರ್ಥಿಗಳು 10 ಕ್ಕಿಂತ ಹೆಚ್ಚಿಗೆ ಇದ್ದಲ್ಲಿ ಶೈಕ್ಷಣಿಕ ಅಂಕಗಳ ಮೆರಿಟ್ ಆಧಾರದ ಮೇಲೆ ಮೊದಲಿನ **ಹತ್ತು** ಅಭ್ಯರ್ಥಿಗಳಿಗೆ ಮಾತ್ರ ನೋಂದಾಯಿತ ಅಂಚೆ ಮೂಲಕ ಸಂದರ್ಶನಕ್ಕೆ ಕರೆ ಪತ್ರ ಕಳುಹಿಸತಕ್ಕದ್ದು. ಒಂದು ಹುದ್ದೆಗೆ ಮೆರಿಟ್ ಆಧಾರದ ಮೇಲೆ ಹತ್ತು ಅಭ್ಯರ್ಥಿಗಳು ಮಾತ್ರ ಸಂದರ್ಶನಕ್ಕೆ ಅರ್ಹರಾಗುತ್ತಾರೆ. ಹುದ್ದೆಗಳಿಗೆ ಅರ್ಜಿ ಆಹ್ವಾನಿಸುವಾಗ ಸಂದರ್ಶನ ದಿನಾಂಕವನ್ನು ಪ್ರಕಟಣೆಯಲ್ಲಿಯೇ ಪ್ರಕಟಿಸಬಾರದು.
7) ಈಗಾಗಲೇ ಈ ಕಚೇರಿಯ ಸುತ್ತೋಲೆ **ಸಂಖ್ಯೆ:ಜಿ1:ಶಾಶಿಅ:ಇತರೆ:48:2007-08 ದಿನಾಂಕ: 03-09-2009 ರಲ್ಲಿ ನಿರ್ದೇಶಿಸಿದಂತೆ** ಸರ್ಕಾರದ ಆದೇಶ ಸಂಖ್ಯೆ: ಇಡಿ 17 ಎಸ್‌ಎಲ್‌ಬಿ 2008, ದಿನಾಂಕ: 22-11-2008 ರ ಪ್ರಕಾರ ಎಲ್ಲ ನೇಮಕಾತಿ ಪ್ರಕ್ರಿಯೆಯಲ್ಲಿ ಸದರ ಆದೇಶ ಅನುಬಂಧ-1 (ಬಿ)(ಛಿ) ರಲ್ಲಿ ಸೂಚಿಸಿದಂತೆ, ಆಯ್ಕೆ ಸಮಿತಿಯಲ್ಲಿ ಓರ್ವ ಸಾರ್ವಜನಿಕ ಶಿಕ್ಷಣ ಇಲಾಖೆಯ ಪ್ರತಿನಿಧಿ ಇರತಕ್ಕದ್ದು. ಇಲಾಖಾ ಪ್ರತಿನಿಧಿ ಇಲ್ಲದೇ ಸಂದರ್ಶನ ನಡೆಸುವ ನೇಮಕಾತಿಗಳನ್ನು ಮಾನ್ಯ ಮಾಡಲಾಗುವುದಿಲ್ಲ. ಇಲಾಖಾ ಪ್ರತಿನಿಧಿಗಳನ್ನು ಉಪನಿರ್ದೇಶಕರು ನೇಮಕ ಮಾಡತಕ್ಕದ್ದು. ಮತ್ತು ಅವರು ಎಲ್ಲ ನಿಯಮಗಳ ಪಾಲನೆಗೆ ಬದ್ಧರಾಗಿರತಕ್ಕದ್ದು. ಸಂಬಂಧಿಸಿದ ಜಿಲ್ಲೆಯ ಉಪನಿರ್ದೇಶಕರು ಇಲಾಖಾ ಪ್ರತಿನಿಧಿ ಇಲ್ಲದೇ ಸಂದರ್ಶನ ನಡೆಸುವ ನೇಮಕಾತಿಗಳನ್ನು ಅನುಮೋದನೆಗಾಗಿ ಜಿಲ್ಲಾ ಪರಿಶೀಲನಾ ತ್ರಿ-ಸದಸ್ಯ ಸಮಿತಿಯ ಮುಂದೆ ಮಂಡಿಸತಕ್ಕದ್ದಲ್ಲ ಹಾಗೂ ಅಂತಹ ಪ್ರಸ್ತಾವನೆಗಳನ್ನು ಅನುಮೋದನೆಗಾಗಿ ಈ ಕಛೇರಿಗೆ ಸಲ್ಲಿಸತಕ್ಕದ್ದಲ್ಲ.
8) ಹುದ್ದೆ ಭರ್ತಿ ಮಾಡಲು ಅನುಮೋದನೆ ನೀಡಿದ ನಂತರ ಒಟ್ಟಾರೆ ಅನುದಾನಕ್ಕೆ ಒಳಪಡಿಸಿದ ಹುದ್ದೆಗಳ ಮಿತಿಯಲ್ಲಿರುವುದನ್ನು ದೃಢೀಕರಿಸಿಕೊಳ್ಳತಕ್ಕದ್ದು.
9) ಈ ಖಾಲಿ ಹುದ್ದೆಗಳನ್ನು ತುಂಬಿಕೊಳ್ಳಲು ಬೋಧಕ ಸಿಬ್ಬಂದಿ ಹುದ್ದೆಗಳು ಅನುದಾನಿತ ಹುದ್ದೆಗಳಾಗಿರಬೇಕು ಹಾಗೂ ಅನುದಾನ ಸಂಹಿತೆಯ ದಿನಾಂಕ: 02-02-2000 ರ ಸಿಬ್ಬಂದಿ ಮಾದರಿ ಸ್ಥರ ವಿನ್ಯಾಸ ಮತ್ತು ಶಿಕ್ಷಣ ಅಧಿನಿಯಮ ಹಾಗೂ ಮಕ್ಕಳ ಸಂಖ್ಯೆ ಹಾಗೂ ಬೋಧನಾ ಅವಧಿಯ ಅನ್ವಯ ಮತ್ತು ಇಲಾಖೆಯಿಂದ ಕಾಲಕಾಲಕ್ಕೆ ಹೊರಡಿಸಿದ ಸುತ್ತೋಲೆಗಳನ್ವಯ ಇರಬೇಕು.
10) ಹುದ್ದೆಗಳನ್ನು **ರಾಜ್ಯಮಟ್ಟದ ವ್ಯಾಪಕ ಪ್ರಸಾರದಲ್ಲಿರುವ ದಿನಪತ್ರಿಕೆಗಳಲ್ಲಿ ಯಾವ ಹುದ್ದೆ ಯಾವ ಕೋಮು ಅಂದರೆ ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡ, ಇತರೆ ಪ್ರವರ್ಗ, ಸಾಮಾನ್ಯ ಹೀಗೆ ಯಾವ ಪ್ರವರ್ಗಕ್ಕೆ ಮೀಸಲು ಇಡಲಾಗಿದೆ ಎಂಬುದನ್ನು ನಿಖರವಾಗಿ ನಮೂದಿಸಿ ಪ್ರಕಟಿಸತಕ್ಕದ್ದು ಪ್ರಕಟಣೆಯಲ್ಲಿ ಹುದ್ದೆಗೆ ಅವಶ್ಯವಾದ ವಿದ್ಯಾರ್ಹತೆ ಹಾಗೂ ವೇತನ ಶ್ರೇಣಿ ನಮೂದಿಸಿ ಪ್ರಕಟಣೆ ನೀಡತಕ್ಕದ್ದು** ಹಾಗೂ ದಿನ ಪತ್ರಿಕೆಯ ಪ್ರಕಟಣೆಯ ಪ್ರತಿಯನ್ನು ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಉಪನಿರ್ದೇಶಕರು ಹಾಗೂ ಉದ್ಯೋಗ ವಿನಿಮಯ ಅಧಿಕಾರಿಗಳಿಗೆ ಸಲ್ಲಿಸತಕ್ಕದ್ದು.

11) ಪ್ರಕಟಣೆಯಲ್ಲಿ ಆಡಳಿತ ಮಂಡಳಿಗೆ ಅಭ್ಯರ್ಥಿಯು ಸಲ್ಲಿಸುವ ಅರ್ಜಿಯ ಒಂದು ಪ್ರತಿಯನ್ನು ಉಪನಿರ್ದೇಶಕರು, (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಹಾವೇರಿ ಇವರ ಕಛೇರಿಗೆ ಸಲ್ಲಿಸುವಂತೆ ತಿಳಿಸಿ ಕಡ್ಡಾಯವಾಗಿ ಪ್ರಕಟಿಸುವುದು.

12) ಶಿಕ್ಷಕರ ಹುದ್ದೆಗೆ ತರಬೇತಿ ಹೊಂದಿದ ನಿಗದಿತ ವಯೋಮಿತಿ ಹಾಗೂ ಅರ್ಹ ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳನ್ನು ಆಯ್ಕೆ ಮಾಡತಕ್ಕದ್ದು.

13) **ಉಲ್ಲೇಖ (12)ರಲ್ಲಿನ ಸರ್ಕಾರದ ಆದೇಶದ ದಿನಾಂಕ: 06-03-2019ರ ಪ್ರಕಾರ ಈಗಾಗಲೇ ಅನುದಾನಕ್ಕೆ ಒಳಪಟ್ಟಿರುವ ಶಾಲೆಯ ಒಟ್ಟಾರೆ ಫಲಿತಾಂಶದ ಬದಲು ವಿಷಯವಾರು ಫಲಿತಾಂಶವನ್ನು ಪರಿಗಣಿಸಿ ಶೇಕಡಾ 60% ಕ್ಕಿಂತ ಕಡಿಮೆ ಫಲಿತಾಂಶ ಪಡೆದಿರುವ ವಿಷಯ ಶಿಕ್ಷಕರನ್ನು ಗುರುತಿಸಿ ಅಂತಹವರ ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವದು.**

14) **ಅನುದಾನ ಪಡೆಯುತ್ತಿರುವ ವಿಷಯ ಶಿಕ್ಷಕರು ನಿರಂತರ 3 ವರ್ಷಗಳಲ್ಲಿ ಶೇ 60% ಕ್ಕಿಂತ ಕಡಿಮೆ ಫಲಿತಾಂಶ ನೀಡಿದಲ್ಲಿ ಅಂತಹ ವಿಷಯ ಶಿಕ್ಷಕರ ವೇತನಾನುದಾನವನ್ನು ತಡೆ ಹಿಡಿಯುವದು.**

15) **ಒಂದು ಅನುದಾನಿತ ಪ್ರೌಢಶಾಲೆಯೂ ಸತತ 5 ವರ್ಷಗಳಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಗಳಲ್ಲಿ 5 ವರ್ಷಗಳು ನಿರಂತರವಾಗಿ ಕನಿಷ್ಠ ಶೇ 50% ವಿದ್ಯಾರ್ಥಿಗಳು ಉತ್ತೀರ್ಣರಾಗದಿದ್ದಲ್ಲಿ ಶಾಲೆಗೆ ನೀಡಲಾಗುತ್ತಿರುವ ವೇತನಾನುದಾನವನ್ನು ತಡೆಹಿಡಿಯುವದು.**

16) **ಖಾಲಿ ಹುದ್ದೆಗೆ ಎದುರಾಗಿ ಅನುದಾನಕ್ಕೆ ಒಳಪಡುವ ವಿಷಯ ಶಿಕ್ಷಕರು ಸಂಬಂಧಪಟ್ಟ ವಿಷಯದಲ್ಲಿ ಶೇ 60% ಕ್ಕಿಂತ ಕಡಿಮೆ ಫಲಿತಾಂಶ ಬಂದಲ್ಲಿ ಅವರ ಮುಂದಿನ ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವದು, ನಿರಂತರವಾಗಿ 3 ವರ್ಷಗಳು ವಿಫಲವಾದಲ್ಲಿ ಅವರ ವೇತಾನುದಾನವನ್ನು ಹಿಂಪಡೆಯುವದು.**

17) **ಮೇಲ್ಕಂಡ ಷರತ್ತುಗಳನ್ನು ಪೂರೈಸಿರುವ ಅಥವಾ ವಿಫಲವಾಗಿರುವ ಬಗ್ಗೆ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಪ್ರತಿ ಶೈಕ್ಷಣಿಕ ವರ್ಷದ ಎಸ್.ಎಸ್.ಎಲ್.ಸಿ ಪ್ರಕಟಗೊಂಡ ನಂತರ ಇದರ ಮೇಲುಸ್ತುವಾರಿ ಕ್ರಮವನ್ನು ಕಡ್ಡಾಯವಾಗಿ ಕೈಗೊಳ್ಳುವದು ಹಾಗೂ ಅನುಸರಣಾ ವರದಿಯನ್ನು ಈ ಕಛೇರಿಗೆ ಸಲ್ಲಿಸುವದು.**

18) ನೇಮಕಾತಿಯಲ್ಲಿ ಇಲಾಖೆಗೆ ಯಾವುದೇ ಸುಳ್ಳು ಹಾಗೂ ತಪ್ಪು ಮಾಹಿತಿ ನೀಡಿ, ಅನುಮೋದನೆ ಪಡೆದಲ್ಲಿ ಅಂತಹ ಆದೇಶಗಳನ್ನು ಹಿಂದಕ್ಕೆ ಪಡೆಯುವ ಅಧಿಕಾರವನ್ನು ಇಲಾಖೆ ಕಾಯ್ದಿರಿಸಿಕೊಂಡಿದೆ.

19) ಉಲ್ಲೇಖ (9)ರ ಸಿಬ್ಬಂದಿ ಮಾದರಿ ಸ್ಥಿರ ವಿನ್ಯಾಸ ಸರ್ಕಾರಿ ಆದೇಶದ ಪ್ರಕಾರ ಮಕ್ಕಳ ದಾಖಲಾತಿ:ಹಾಜರಾತಿ ಕಡಿಮೆ ಆದಲ್ಲಿ ಅನುಮತಿಸಿದ ಹುದ್ದೆಯ ಆದೇಶವು ತನ್ನಿಂದ ತಾನೇ ರದ್ದಾಗುವುದು.

20) ಈ ಕಛೇರಿಯಿಂದ ಹುದ್ದೆ ತುಂಬಲು ಅನುಮತಿ ನೀಡಿದ ಎರಡು ತಿಂಗಳ ಒಳಗಾಗಿ ಪತ್ರಿಕಾ ಪ್ರಕಟಣೆ ನೀಡಿ ನೇಮಕಾತಿ ಪ್ರಕ್ರಿಯೆ ನಡೆಸಿ ಸಂಬಂಧಿಸಿದ ಸಕ್ಷಮ ಪ್ರಾಧಿಕಾರಿಗಳ ಮುಖಾಂತರ ಪ್ರಸ್ತಾವನೆಯನ್ನು ಅನುಮೋದನೆಗಾಗಿ ಎಲ್ಲ ದಾಖಲೆಗಳನ್ನು ಧೃಢೀಕರಿಸಿ ಸಲ್ಲಿಸುವುದು.

21) ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 97 ಸಿಸಿಸಿ 2002, ಬೆಂಗಳೂರು ದಿನಾಂಕ: 22-11-2002 ರನ್ವಯ ಶೇ, 30 ರಷ್ಟು ಮಹಿಳಾ ಮೀಸಲಾತಿ ನಿಯಮ ಕಡ್ಡಾಯವಾಗಿ ಪಾಲಿಸಲು ತಿಳಿಸಲಾಗಿದೆ.

22) ಆಯ್ಕೆಗೊಂಡ ಅಭ್ಯರ್ಥಿಗೆ ಇಲಾಖೆಯಿಂದ ನೇಮಕಾತಿ ಅನುಮೋದನೆ ಆದ ನಂತರವೇ ನೇಮಕಾತಿಯ ಆದೇಶ ನೀಡುವುದು.

23) ಶಿಕ್ಷಕರ ನೇಮಕಾತಿಯನ್ನು ಅನುದಾನಸಹಿತವಾಗಿ ಅನುಮೋದಿಸಿ ಆದೇಶ ಹೊರಡಿಸಿದ ದಿನಾಂಕದಿಂದ ಮಾತ್ರ ವೇತನಾನುದಾನ ನೀಡತಕ್ಕದ್ದು.

24) ಸದರ ಆಡಳಿತ ಮಂಡಳಿಯಿಂದ ಅನುದಾನಿತ ಪ್ರಾಥಮಿಕ ಶಾಲೆ ಅಥವಾ ಸಂಯುಕ್ತ ಪ್ರೌಢ ಶಾಲೆಗಳು ನಡೆಯುತ್ತಿದ್ದಲ್ಲಿ ಅಂತಹ ಶಾಲೆಗಳಲ್ಲಿ ಸಹ ಶಿಕ್ಷಕ ಗ್ರೇಡ್-2 ಹುದ್ದೆಗಳಿಗೆ ನಿಗದಿತ ವಿದ್ಯಾರ್ಹತೆ ಹೊಂದಿದ ಪ್ರಾಥಮಿಕ ಶಾಲಾ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಲ್ಲಿ ಶೇಕಡ 50% ರಷ್ಟು ಖಾಲಿ ಹುದ್ದೆಗಳನ್ನು ಬಡ್ತಿ ಮೂಲಕವೇ ತುಂಬತಕ್ಕದ್ದು.

25) ಈ ಹಿಂದಿನ ನೇಮಕಾತಿಗಳಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಬ್ಯಾಕ್‌ಲಾಗ್ ಹುದ್ದೆಗಳು ಇದ್ದಲ್ಲಿ ಅವುಗಳನ್ನು ಭರ್ತಿ ಮಾಡಿ ಸರಿದೂಗಿಸಿದ ನಂತರವೇ ಈ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳತಕ್ಕದ್ದು.

26) ಮೀಸಲಾತಿಯಡಿ ಆಯ್ಕೆಯಾದ ಅಭ್ಯರ್ಥಿಗಳ ಸಕ್ಷಮ ಪ್ರಾಧಿಕಾರದಿಂದ ಪಡೆದ ಸಿಂಧುತ್ವ ಪ್ರಮಾಣ ಪತ್ರವನ್ನು ಹಾಗೂ ಶೈಕ್ಷಣಿಕ ಪ್ರಮಾಣ ಪತ್ರಗಳ ನೈಜತೆ ಇರುವ ಬಗ್ಗೆ ಅನುಮೋದನೆ ಪ್ರಸ್ತಾವನೆಯೊಂದಿಗೆ ಕಡ್ಡಾಯವಾಗಿ ಲಗತ್ತಿಸಿ ಸಲ್ಲಿಸತಕ್ಕದ್ದು.

27) ಆಡಳಿತ ಮಂಡಳಿಯ ಮಾಲೀಕತ್ವದ ಬಗ್ಗೆ ಯಾವುದೇ ರೀತಿಯ ವ್ಯಾಜ್ಯ ಇರತಕ್ಕದ್ದ ವೇಳೆ ವ್ಯಾಜ್ಯ ಇದ್ದಲ್ಲಿ ಅಂಥ ಸಂಸ್ಥೆಗಳು ಈ ಆದೇಶದಡಿ ನೇಮಕಾತಿಗಳ ಅನು ಅನುಮೋದನೆಗೆ ಅರ್ಹತೆ ಪಡೆಯುವದಿಲ್ಲ.

28) ಪ್ರಸ್ತಾವನೆಯೊಂದಿಗೆ ಸಲ್ಲಿಸಲಾದ ಯಾವುದೇ ಮಾಹಿತಿಗಳು ಸುಳ್ಳು ಮತ್ತು ತಪ್ಪಾಗಿರುವುದು ಕಂಡು ಬಂದಲ್ಲಿ ಸೂಕ್ತ ಮಾರ್ಪಾಡು ಮಾಡುವ ಅಧಿಕಾರವನ್ನು ಇಲಾಖೆಯು ಹೊಂದಿರುತ್ತದೆ.

29) ಹುದ್ದೆ ಮಂಜೂರಾತಿಗೆ ಸಂಬಂಧಿಸಿದಂತೆ ಇಲಾಖೆಗೆ ಸುಳ್ಳು ಹಾಗೂ ತಪ್ಪು ಮಾಹಿತಿ ನೀಡಿದ್ದು ಕಂಡುಬಂದಲ್ಲಿ ಈ ಕೆಳಗೆ ಸಹಿಮಾಡಿದ ಪ್ರಾಧಿಕಾರವು ಯಾವುದೇ ಮುನ್ಸೂಚನೆ ನೀಡದೆ ಈ ಆದೇಶವನ್ನು ಹಿಂದಕ್ಕೆ ಪಡೆಯುವ ಅಧಿಕಾರ ಹೊಂದಿರುತ್ತದೆ ಮತ್ತು ಸಂಬಂಧಿಸಿದವರ ವಿರುದ್ಧ ನಿಯಮಾನುಸಾರ ಸೂಕ್ತ ಕ್ರಮ ಜರುಗಿಸಲಾಗುವುದು.

(ಮೇಜರ್ ಸಿದ್ದಲಿಂಗಯ್ಯ ಎಸ್. ಹಿರೇಮಠ)
ಅಪರ ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಧಾರವಾಡ.

ಇವರಿಗೆ.

1. ಉಪನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ.
2. ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಹರವಲಯ, ಹುಬ್ಬಳ್ಳಿ.
3. ಅಧ್ಯಕ್ಷರು/ಕಾರ್ಯದರ್ಶಿಗಳು, **ಹುಬ್ಬಳ್ಳಿ ಎಜ್ಯುಕೇಶನ್ ಸೊಸೈಟಿ(ರಿ) ಹುಬ್ಬಳ್ಳಿ ಜಿ:ಧಾರವಾಡ.**
4. ಕಛೇರಿ ಪ್ರತಿ

**ಪ್ರತಿ ಆದರಪೂರ್ವಕವಾಗಿ ಮಾಹಿತಿಗಾಗಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ), ಬೆಂಗಳೂರು.
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಧಾರವಾಡ.

ಆಯುಕ್ತರ ಕ.ಸಾ.ಶಿ.ಇ. ಧಾರವಾಡ
ಜಾ. ನಂ: 82
ದಿನಾಂಕ: 6-5-20